ಓ ಎಸ್ **117/2018**

ಡಿ ಡಬ್ಲ್ಯೂ **-3**

**ದಿಃ 24.02.2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ವಾಟೀ ಸವಾಲು ಃ ವಾದಿ ಪರ ಶ್ರೀ ಎ ಎಸ್ ಎಸ್ ವಕೀಲರಿಂದ ಃ**

ವಾದಿ ಈ ದಾವೆಯನ್ನು ಭಾಗಕೊಡಬೇಕೆಂದು ಹೂಡಿರುತ್ತಾರೆ. ಈ ದಾವೆಯನ್ನು ಎಷ್ಟು ಐಟಂ ಸ್ವತ್ತುಗಳ ಮೇಲೆ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ನಮ್ಮ ಕುಟುಂಬಕ್ಕೆ 2 ಐಟಂ ಸ್ವತ್ತುಗಳಿರುತ್ತವೆ. ನಮ್ಮ ಕುಟುಂಬಕ್ಕೆ ಸ.ನ. 105 ಮತ್ತು 106 ಸ್ವತ್ತುಗಳು ಸೇರಿರುತ್ತವೆ. ವಾದಿ ಸದರಿ ಸ.ನಂ. 105 ಮತ್ತು 106 ರಲ್ಲಿ ಭಾಗ ಬೇಕೆಂದು ಈ ದಾವೆಯನ್ನು ಹಾಕಿರುತ್ತಾರೆ. ನಮ್ಮ ಕುಟುಂಬಕ್ಕೆ ಸೇರಿದ ಸ.ನಂ. 105 ಮತ್ತು 106 ನ್ನು ಬಿಟ್ಟು ಇನ್ನು 2 ಸ್ವತ್ತುಗಳಿರುತ್ತವೆ. ಒಟ್ಟಾರೆ ನಮ್ಮ ಕುಟುಂಬದ ಸ್ವತ್ತುಗಳ ಮೇಲೆ ವಾದಿ ಭಾಗ ಬೇಕೆಂದು ಹಾಕಿರುತ್ತಾರೆ ಎಂದರೆ ಸರಿ. ಒಟ್ಟಾರೆ ಈ ದಾವೆಯಲ್ಲಿ ಹಾಕಿರುವ ಸ್ವತ್ತುಗಳು ವಿಭಾಗ ಆಗಿರುವುದಿಲ್ಲ ಎಂದರೆ ಆಗಿರುತ್ತದೆ.

ವಿಭಾಗ ಆಗಿರುತ್ತದೆ ಎಂದು ತೋರಿಸಲು ಯಾವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೀರಾ ಎಂದರೆ ಸಾಕ್ಷಿ ನಮ್ಮ ತಂದೆಯವರು ಮೌಖಿಕವಾಗಿ ಸ್ವತ್ತುಗಳನ್ನು ವಿಭಾಗ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮೌಖಿಕವಾಗಿ ಬಂದ ಆಸ್ತಿಗಳ ಚೆಕ್ ಬಂದಿ ನನಗೆ ಹೇಳಲು ಬರುತ್ತದೆ. ಸದರಿ ಸ.ನಂ. ಗಳು ಯಾವುದು ಎಂದು ಕೇಳಿದರೆ ಸಾಕ್ಷಿ ಸದರಿ ಸ.ನಂ. ಗಳು ನಮ್ಮ ತಾತನ ಜಮೀನುಗಳಾಗಿದ್ದು, ಅದನ್ನು ನನಗೆ ಈಗ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಯಾರು ಯಾರಿಗೆ ಎಷ್ಟು ವಿಸ್ತೀರ್ಣ ಮತ್ತು ಚೆಕ್ ಬಂದಿ ಭಾಗಕ್ಕೆ ಬಂದಿತ್ತು ಎಂದು ಹೇಳಲಾಗುತ್ತದೋ ಎಂದರೆ ಸಾಕ್ಷಿ ನನಗೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಯಾವ ಆಧಾರದ ಮೇಲೆ ವಿಭಾಗ ಆಗಿರುತ್ತದೆ ಎಂದು ನಾನು ಹೇಳುತ್ತೇನೆ ಎಂದರೆ ಸಾಕ್ಷಿ ನಮ್ಮ ತಂದೆ ಕಣ್ಣು ಗುರುತಿನಲ್ಲಿ ಗುರತಿಸಿದ್ದರ ಆಧಾರದ ಮೇಲೆ ನಾನು ಭಾಗ ಆಗಿರುತ್ತದೆ ಎಂದು ಹೇಳುತ್ತೇನೆ. ನಮ್ಮ ತಂದೆ ಕಣ್ ಗುರುತಿನಲ್ಲಿ ಗುರುತಿಸಿದ್ದರ ಆಧಾರದ ಮೇಲೆ ಭಾಗ ಆಗಿರುವುದಕ್ಕೆ ಕಂದಾಯ ದಾಖಲಾತಿಗಳು ಆಗಿರುತ್ತದೆಯೇ ಎಂದರೆ ಸಾಕ್ಷಿ ಪಹಣಿ ಮತ್ತು ಮ್ಯುಟೇಷನ್ ಆಗಿರುತ್ತದೆ , ಅದು ನನ್ನ ಅಣ್ಣನ ಹತ್ತಿರ ಇರುತ್ತದೆ ಎಂದು ನುಡಿಯುತ್ತಾರೆ. ಪಹಣಿ , ಮ್ಯುಟೇಷನ್

ನನ್ನ ತಾತನ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಾತನ ಕಾಲದಿಂದ ಪಹಣಿ , ಮ್ಯುಟೇಷನ್ ಯಾರ ಹೆಸರಿನಲ್ಲಿ ಬದಲಾವಣೆ ಆಗಿರುವುದಿಲ್ಲ.

ನಾನು ಈ ದಾವೆಗೆ ತಕರಾರು ಹಾಕಿರುತ್ತೇನೆ. ತಕರಾರಿನಲ್ಲಿ ನಾನು ಈ ದಿನದವರೆವಿಗೂ ಭಾಗದ ಬಗ್ಗೆ ಬರೆಯಿಸಿ ಹಾಕಿರುವುದಿಲ್ಲ. ನಾನು ಹೇಳಿದ ಪ್ರಕಾರ ಭಾಗ ಆಗಿದ್ದರೆ ಅದನ್ನು ನನಗೆ ತಕರಾರಿನಲ್ಲಿ ಬರಯಿಸಿ ಹಾಕಲು ಯಾವುದೇ ತೊಂದರೆ ಇರಲಿಲ್ಲ. ಯಾವ ಕಾರಣದಿಂದ ಸದರಿ ಮೌಖಿಕ ಭಾಗದ ಬಗ್ಗೆ ತಕರಾರಿನಲ್ಲಿ ಬರೆಯಿಸಿಲ್ಲ ಎಂದರೆ ಸಾಕ್ಷಿ ಈ ದಾವೆಯಲ್ಲಿ ನಾವು ಸ್ವಾಧೀನ ಇರುವ ಜಮೀನು ನಮಗೆ ಮಾಡಿಕೊಡಿ ಎಂದು ನಾವು ದಾವೆಯನ್ನು ಹೂಡಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಸ್ವಾಧೀನದಲ್ಲಿರುತ್ತೇನೆ ಎಂದು ಕೇಳಿ ಮತ್ತೊಂದು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಸದರಿ ದಾವೆ ಈಗಲೂ ನಡೆಯುತ್ತಿದೆ.

ದಾವಾ ಐಟಂ ನಂಬರ್ 2 ರ ಬಗ್ಗೆ ನಾನು ಸದರಿ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಸದರಿ ದಾವೆ ಹೂಡಿದಾಗ ನಾನು T.I. ಕೇಳಿದ್ದೆ ಎಂದರೆ ಸರಿ. ಸದರಿ ಅರ್ಜಿ ವಜಾ ಆಗಿದೆ ಎಂದರೆ ಸರಿ. ನಾನು ವಜಾ ಮಾಡಿದ ಆದೇಶದ ವಿರುದ್ದ ಅಪೀಲು ಹೋಗಿರುವುದಿಲ್ಲ . ರಂಗಯ್ಯನವರು ಮೊದಲನೆ ಐಟಂ ಸ್ವತ್ತಿನ ಸಂಬಂಧ ಮತ್ತೊಂದು ದಾವೆಯನ್ನು ಹೂಡಿರುವ ವಿಚಾರ ನನಗೆ ಗೊತ್ತಿಲ್ಲ. ದಾವಾ ಐಟಂ ನಂಬರ್ 1 ಮತ್ತು 2 ಒಟ್ಟು ಕುಟುಂಬದ ಸ್ವತ್ತುಗಳೆಂದರೆ ಸರಿಯಲ್ಲ. ಈಗಲೂ ವಾದಿ ಸದರಿ ದಾವಾ ಐಟಂ ನಂಬರ್ 1 ಮತ್ತು 2 ರಲ್ಲಿ ವ್ಯವಸಾಯ ಮಾಡುತ್ತಾರೆ , ನಾನು ಊರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ಮೂಲವಾಗಿ ನಾನು , ಚಿಕ್ಕರಾಜು, ಮರಿಯಪ್ಪ ಮತ್ತು ಚಿಕ್ಕಣ್ಣ ಭದ್ರಾವತಿಯಲ್ಲಿ ವಾಸವಾಗಿದ್ದೇವು ಎಂದರೆ ಸರಿ. ಈಗಲೂ ನಾವು ಅಲ್ಲೇ ವಾಸವಿರುತ್ತೇವೆ ಎಂದರೆ ಸರಿಯಲ್ಲ. ಊರಿನಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿದ್ದೀರಿ ಎಂದರೆ ಸಾಕ್ಷಿ 30 ವರ್ಷಗಳಿಂದ ವಾಸವಾಗಿರುತ್ತೇವೆ ಎಂದು ನುಡಿಯುತ್ತಾರೆ. ನಾನು 30 ವರ್ಷಗಳಿಂದ ಕಲ್ಕೆರೆಯಲ್ಲಿ ವಾಸವಾಗಿರುವುದಕ್ಕೆ ದಾಖಲಾತಿಗಳನ್ನು ನೀಡಿರುತ್ತೇನೆ. ಕಲ್ಕೆರೆಯಲ್ಲಿ ನಾವು ವಾಸವಾಗಿರುವ ಮನೆಯ ನಂಬರ್ ಹೇಳಲು ಆಗುತ್ತದೆಯೇ ಎಂದರೆ ಸಾಕ್ಷಿ ಅದು ಬಿದ್ದು ಹೋಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮನೆ ಬಿದ್ದು ಹೋಗಿ 15 ವರ್ಷಗಳಾಗಿರುತ್ತದೆ. ಈಗ ನಾನು ಯಾವ ಮನೆಯಲ್ಲಿ ವಾಸವಾಗಿರುತ್ತೇನೆ ಎಂದರೆ ಸಾಕ್ಷಿ ನನ್ನ ಚಿಕ್ಕಪ್ಪನ ಮನೆಯಲ್ಲಿ ವಾಸವಾಗಿರುತ್ತೇನೆ , ನಾನು ಕಟ್ಟಿದ ಮನೆಯನ್ನು ಸುಟ್ಟು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮನೆ ಕಟ್ಟಿರುವುದಕ್ಕೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ನಾನು ಜಮೀನಿನಲ್ಲಿ ಮನೆ ಕಟ್ಟಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಇಟ್ಟಿರುವುದಿಲ್ಲ. ಕಲ್ಕೆರೆಯಲ್ಲಿ ವಾಸ ಮಾಡಲು ಈಗ ನನಗೆ ಸೇರಿದ ಯಾವುದೇ ಮನೆ

ಇರುವುದಿಲ್ಲ. ಈ ದಿನವೂ ಭದ್ರಾವತಿಯಲ್ಲಿ ವಾಸವಾಗಿರುತ್ತೇನೆ ಎಂದರೆ ಸುಳ್ಳು. ನಾನು ಕಲ್ಕೆರೆಯಲ್ಲಿ ವಾಸವಾಗಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸುಳ್ಳು. ಕೊಟ್ಟಿರುತ್ತೇನೆ.

ದಾವಾ ಐಟಂ ನಂಬರ್ 2 ರಲ್ಲಿ ಈಗಲೂ ಕೂಡ ವಾದಿಗಳು ಉಳುಮೆ ಮಾಡುತ್ತಿದ್ದಾರೆ ಎಂದರೆ ಸುಳ್ಳು. ನಾನು ಉಳುಮೆ ಮಾಡುತ್ತಿದ್ದೇನೆ ಮತ್ತು ಸ್ವಾಧೀನದಲ್ಲಿರುತ್ತೇನೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಕೊಟ್ಟಿಲ್ಲ . ನಾನು ಯಾವ ದಿನವೂ ವ್ಯವಸಾಯ ಮಾಡಿರುವುದಿಲ್ಲ ಮತ್ತು ಕಲ್ಕೆರೆಯಲ್ಲಿ ವಾಸವಾಗಿರುವುದಿಲ್ಲ ಆದ್ದರಿಂದ ನಾನು ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಕೊಟ್ಟಿರುತ್ತೇನೆ. ನಮ್ಮ ಕುಟುಂಬದಲ್ಲಿ ಯಾವ ದಿನವೂ ವಿಭಾಗ ಆಗದೇ ಇರುವುದರಿಂದ ನಾನು ವಿಭಾಗಕ್ಕೆ ಸಂಬಂದಿಸಿದಂತೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಕೊಟ್ಟಿರುತ್ತೇನೆ.

1980 ರಲ್ಲಿ ಯಾವ ದಿನಾಂಕ, ತಿಂಗಳು ನಾವು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಕೇಳಿದರೆ ಗೊತ್ತಿಲ್ಲ.

**ಮುಂದುವರೆದ ವಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**